- ಸಾಮಾನ್ಯ ಸದಸ್ಯತ್ವ – 1200/–
- ಪೋಷಕರು – 2000/–
- ಮಹಾಪೋಷಕರು – 5000/–
- ದಾಸೋಹಿಗಳು – 10,000/– ಮೇಲ್ಪಟ್ಟು
- ಅಜೀವ ಸದಸ್ಯತ್ವ – 25,000/–
- ಶ್ರೀ ಬಸವ ಟಿವಿಯ ಜಿಲ್ಲಾ ನಿರ್ದೇಶಕರು – 1,00.000/–

## "ಓಂ ನಮಃ ಶಿವಾಯ"

ಎನ್ನ ಮನದಲ್ಲಿ ಮತ್ತೊಂದನ್ನರಿಯೆನಯ್ಯ
ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಎನಗಿದೇ ಮಂತ್ರ
ಎನಗಿದೇ ಜಪ
ಕೂಡಲಸಂಗಮದೇವಾ
ನೀನೇ ಬಲ್ಲೇ ಎಲೆ ಲಿಂಗವೇ,

ಆದ್ಯರ ವಚನ ಪರುಷ ಕಂಡಯ್ಯಾ
ಸದಾಶಿವನೆಂಬ ಲಿಂಗವ ನಂಬುವುದು
ನಂಬಲೊಡನೆ ನೀ ವಿಜಯಿ ಕಂಡಯ್ಯ
ಅಧರಕ್ಕೆ ಕಹಿ ಉದರಕ್ಕೆ ಸಿಹಿ
ಕೂಡಲಸಂಗನ ಶರಣರ ವಚನ
ಬೇವ ಸವಿದಂತೆ

ಸಪ್ತಕೋಟಿ ಮಹಾಮಂತ್ರಗಳಲ್ಲಿ
'ಓಂ ನಮಃ ಶಿವಾಯ' ಎಂಬುದೇ ಮೂಲ ಮಂತ್ರ
'ಓಂ ನಮಃ ಶಿವಾಯ' ಎಂಬುದೇ ಆದಿ ಮಂತ್ರ
'ಓಂ ನಮಃ ಶಿವಾಯ' ಎಂಬುದೇ ಬೀಜ ಮಂತ್ರ
'ಓಂ ನಮಃ ಶಿವಾಯ' ಎಂಬುದೇ ಮಹಾ ಮಂತ್ರ
'ಓಂ ನಮಃ ಶಿವಾಯ' ಎಂಬ ಮಂತ್ರಕ್ಕೆ
ಸಮ ಮಂತ್ರ ಬೇರಿಲ್ಲ ಕೂಡಲಸಂಗಮದೇವ

## ಶಿವನೆಂದರೆ ಯಾರು

ಶಿವನು ಹುಟ್ಟು ಸಾವಿಲ್ಲದವನು
ಶಿವನು ನಿರಾಕಾರ
ಶಿವನು ಜ್ಯೋತಿ ಸ್ವರೂಪ
ಶಿವನು ಬ್ರಹ್ಮಾಂಡದೊಡೆಯ
ಶಿವನು ಸೃಷ್ಟಿಕರ್ತ
ಶಿವನು ವಿಶ್ವ ಆಡಳಿತಗಾರ
ಶಿವನು ವಿಶ್ವ ಸಿಂಹಾಸನಾದೀಶ್ವರ
ಶಿವನು ವಿಶ್ವ ನ್ಯಾಯಾದೀಶ
ಶಿವನು ಸೃಷ್ಟಿ ಸ್ತಿತಿಲಯ ಕರ್ತ
ಶಿವನಿಗೆ ತಂದೆಯಿಲ್ಲ ತಾಯಿಯಿಲ್ಲ
ಶಿವನಿಗೆ ಸಂತಾನವಿಲ್ಲ
ಶಿವನು ಯಾರ ಸಂತಾನವೂ ಅಲ್ಲ
ಶಿವನು ಸರ್ವ ಶಕ್ತ

ಶಿವನಿಗೆ ಸಹಾಯಕ ದೇವರುಗಳಿಲ್ಲ
ಬ್ರಹ್ಮಾಂಡದಲ್ಲಿರುವುದೆಲ್ಲಾ ಶಿವನ ಸ್ವತ್ತು
ಶಿವನು ಸ್ವರ್ಗಾಧಿಪತಿ
ಶಿವನು ಮೂರು ಲೋಕದ ಒಡೆಯ
ಶಿವನು ಮೂರು ಜಗದ ಕರ್ತ
ಶಿವನು ಸಕಲ ಜೀವರಾಶಿಗಳ ತಂದೆ
ಶಿವನು ಜಗತ್ತಿನ ಏಕೈಕ ದೇವರು
ಹುಟ್ಟಿ ಸತ್ತವರು ದೇವರುಗಳಲ್ಲ
ಲಿಂಗವೂ ನಿರಾಕಾರ
ಶಿವನ ಸಾಕಾರ ಕುರುಹು
ಶಿವನ ಹೆಸರನ್ನು ಅಲ್ಲಾ,
ಯಹೋವಾ, ಓಂಕಾರ,
ಇನ್ನು ಅನೇಕ ಹೆಸರುಗಳಿಂದ ಬೇರೆ
ದೇಶಗಳಲ್ಲಿ ಕರೆಯುತ್ತಾರೆ.

" ಓಂ ನಮಃ ಶಿವಾಯ " " ಶ್ರೀ ಗುರು ಬಸವ ಲಿಂಗಾಯ ನಮಃ "

ಶ್ರೀ ಬಸವ ಟಿವಿ



# ಬಸವತತ್ತ್ವ ಪ್ರಚಾರ ಪ್ರತಿಷ್ಠಾನ (ರಿ)


ಕೆ/ಆಫ್ ಎಸ್.ಎಂ.ಸ್ಕೂಲ್, ಕೆಂಪಾಪುರ ಮುಖ್ಯ ರಸ್ತೆ, ಮಹಾರುದ್ರೇಶ್ವರ ನಗರ,
ಚಿಕ್ಕಬಾಣಾವರ, ಬೆಂಗಳೂರು–560 090.
www.sribasavatv.com sribasavatv@gmail.com
8197885503, 8197885537, 9449022996


## ಮನವಿ

ಶ್ರೀ ಬಸವ ವಾಹಿನಿಯ ವೀಕ್ಷಕ ಬಂಧುಗಳೇ, ಬಸವ ಭಕ್ತರೇ, ಶರಣತತ್ತ್ವನಿಷ್ಟರೇ ನಿಮಗೆಲ್ಲ ನಮಸ್ಕಾರಗಳು, ಶರಣು ಶರಣಾರ್ಥಿ.

ಶ್ರೀ ಬಸವ ಟಿವಿ ರಾಜ್ಯ, ದೇಶ ವಿದೇಶಗಳಲ್ಲಿ ಪ್ರಸಾರವಾಗುತ್ತಿದೆ. ಶರಣ ತತ್ತ್ವಸಿದ್ಧಾಂತಗಳು ಮತ್ತು ವಚನಸಾಹಿತ್ಯ ಜಗತ್ತಿಗೆ ತಲುಪುತ್ತಿದೆ. ಮನುಷ್ಯರ ಜೀವನ ಪಾವನವಾಗಬೇಕಾದರೆ ನಮಗೆ ವಚನಗಳು ಬೇಕು. ಬದುಕಿನ ನಿತ್ಯ ಸಮಸ್ಯೆಗಳನ್ನು ಸಮರ್ಪಕವಾಗಿ ಎದುರಿಸಲು ನಮಗೆ ವಚನಜ್ಞಾನ ಬೇಕು. ಮುಕ್ತಿಮಾರ್ಗ ಸಾಧಿಸಲು ಶರಣರ ವಚನಗಳು ಮಾರ್ಗದರ್ಶನ ನೀಡುತ್ತವೆ. ಪ್ರಸ್ತುತ ವಿಕಾರಗೊಂಡಿರುವಂತಹ ಸಮಾಜವನ್ನು, ಕಲುಷಿತ ಸ್ವೇಚ್ಛಾಚಾರಿ ಜನಜೀವನವನ್ನು ಸರಿಪಡಿಸಲು ಬಸವತತ್ತ್ವ ದಿವ್ಯ ಔಷಧಿಯಾಗಿದೆ.

ಅರಿವು, ಆಚಾರ, ಅನುಭಾವದ ಮೂಲಕ ಮನುಷ್ಯನ ಅಂತರಂಗಶುದ್ಧಿ ಮತ್ತು ಬಹಿರಂಗಶುದ್ಧಿಯಾಗಬೇಕಾಗಿದೆ. ಶೀಲಾಧಾರಿತ ಪರಿಶುದ್ಧ ಮತ್ತು ಶ್ರೇಷ್ಠ ಕೌಟುಂಬಿಕ ಜೀವನವನ್ನು ರೂಪಿಸಿಕೊಳ್ಳಬೇಕಾಗಿದೆ. ವಿಕಾರಗೊಳ್ಳುತ್ತಿರುವ ಮನುಷ್ಯನ ಮನಸ್ಸು ಮತ್ತು ಬುದ್ಧಿಯನ್ನು ದೈವತ್ವದ ಕಡೆ ತಿರುಗಿಸಿ ಶಿವಾನುಗ್ರಹ ಪಡೆಯಬೇಕಾಗಿದೆ. ಬಸವಾದಿ ಶಿವಶರಣರು ನೀಡಿರುವ ಶಿವಸಂಸ್ಕಾರ ಮತ್ತು ಸಾಮಾಜಿಕ ಮೌಲ್ಯಗಳನ್ನು ಹಾಗೂ ಅಧ್ಯಾತ್ಮಿಕ ಜ್ಞಾನಸಂಪತ್ತನ್ನು ನಮ್ಮ ಮುಂದಿನ ಯುವಪೀಳಿಗೆಗೆ ಕೊಡಬೇಕಾಗಿದೆ.

ಬಂಧುಗಳೇ, ಒತ್ತಡರಹಿತ ಸರಳಜೀವನ, ಶಾಂತಿ, ಸಮಾಧಾನ, ಸಂತೃಪ್ತಿ, ನೆಮ್ಮದಿ ಮತ್ತು ಬದುಕಿನ ಭರವಸೆ ಹಾಗೂ ಶಿವಜ್ಞಾನ ಗಳಿಸಿಕೊಳ್ಳಲು **ನಿತ್ಯನಿರಂತರ ಶ್ರೀ ಬಸವ ಟಿವಿಯನ್ನು ವೀಕ್ಷಿಸಿ.** ಶ್ರೀ ಬಸವ ಟಿ ವಿ ಇದು ಸರ್ವಜನಾಂಗದ ಟಿವಿ, ಕನ್ನಡದ ಏಕೈಕ ಭಕ್ತಿ, ಜ್ಞಾನ ಮತ್ತು ಮುಕ್ತಿಮಾರ್ಗ ಟಿ ವಿ. ಇದು ಸಂಸ್ಕಾರದ ಬೆಳಕು.

ಇಂತಹ ಭಕ್ತಿವಾಹಿನಿಯನ್ನು ಅಭಿವೃದ್ಧಿಪಡಿಸಿ ಅರ್ಥಪೂರ್ಣ ಕಾರ್ಯಕ್ರಮಗಳನ್ನು ರೂಪಿಸಲು ಆರ್ಥಿಕ ಸಹಾಯ ಬೇಕಾಗಿದೆ, ಭಕ್ತಿಚಾನಲ್‌ಗಳಿಗೆ ಜಾಹೀರಾತುಗಳು ಸಿಗುವುದಿಲ್ಲ, ಬಸವ ವಾಹಿನಿಯಲ್ಲಿ ಮೂಢನಂಬಿಕೆ ಹುಟ್ಟಿಸುವಂತಹ ಜಾಹೀರಾತುಗಳನ್ನು ಮತ್ತು ಅಶ್ಲೀಲ ಜಾಹೀರಾತುಗಳನ್ನು ತೋರಿಸಲಾಗುವುದಿಲ್ಲ. ಹೀಗಾಗಿ ವಾಹಿನಿಗೆ ಆರ್ಥಿಕ ಮುಗ್ಗಟ್ಟು ಉಂಟಾಗುತ್ತದೆ, ಆದ್ದರಿಂದ ಬಸವತತ್ತ್ವ ಪ್ರಚಾರ ಪ್ರತಿಷ್ಠಾನವು ಬಸವ ಟಿವಿ ವೀಕ್ಷಕರಿಂದ ಭಕ್ತಿದಾಸೋಹ ರೂಪದಲ್ಲಿ ಆರ್ಥಿಕ ನೆರವನ್ನು ಬಯಸಿ ಜನರನ್ನು ವಾಹಿನಿಗೆ ಸದಸ್ಯರನ್ನಾಗಿ ನೇಮಿಸಿಕೊಂಡು ಸದಸ್ಯತ್ವದ ಹಣದಿಂದ ವಾಹಿನಿಯನ್ನು ನಡೆಸಲಾಗುತ್ತಿದೆ, ಆದ್ದರಿಂದ ದಯಮಾಡಿ ತಾವುಗಳು ವಾಹಿನಿಗೆ ಸದಸ್ಯರಾಗಿ ಬಸವತತ್ತ್ವ ಪ್ರಚಾರಕ್ಕೆ ಕೈ ಜೋಡಿಸಬೇಕೆಂದು ಪ್ರಾರ್ಥನೆ.

ಶರಣು ಶರಣಾರ್ಥಿಗಳು ಇಂತಿ ಶ್ರೀ ಬಸವ ಟಿವಿ